



ಪೈನ್ ಮರ



ಸಿಕೊಯಾ ಕೆಂಪು ಮರ



ಅಂಜೂರ ಮರ

# ಆಹಾ ವೃಕ್ಷ..!

ಮರ ಹಳತಾದರೆ ಹೆಚ್ಚು ಬೆಲೆ ಅಂದುಕೊಂಡು ಅದನ್ನು ಮಾರಾಟ ಮಾಡುವವರೇ ಹೆಚ್ಚಿದ್ದರೂ ಹಳೆಯ ಮರಗಳನ್ನು ಜೀವಕ್ಕಿಂತ ಹೆಚ್ಚಾಗಿ ರಕ್ಷಿಸುವ ಜನರೂ ಇದ್ದಾರೆ.

ಉತ್ತರ ಅಮೆರಿಕದ ಬ್ರಿಸ್ಟಲೋನ್‌ನಲ್ಲಿರುವ ಪೈನ್ ಮರ ಜಗತ್ತಿನ ಎಲ್ಲ ಮರಗಳಿಗೂ ಮುತ್ತಾತ ಎನ್ನುತ್ತವೆ ದಾಖಲೆಗಳು. ಏಕೆಂದರೆ ಈ ಅತಿ ಪುರಾತನ ಮರದ ವಯಸ್ಸು ಎಷ್ಟು ಗೊತ್ತಾ? ಬರೋಬ್ಬರಿ 3650 ವರ್ಷಗಳು! 275 ಅಡಿ ಎತ್ತರವಿರುವ ಇದರ ವ್ಯಾಸ 52513 ಘನ ಅಡಿಗಳು.

ಆದರೆ ಇದಕ್ಕಿಂತ ಎತ್ತರದ ಮರ ಕ್ಯಾಲಿಫೋರ್ನಿಯಾದ ನ್ಯಾಷನಲ್ ಪಾರ್ಕ್‌ನಲ್ಲಿ ಬದುಕಿದೆ. ಸಿಕೊಯಾ ಜಾತಿಯ ಕೆಂಪು ಮರ 388 ಅಡಿ ಎತ್ತರವಾಗಿದ್ದು ಜಗತ್ತಿನಲ್ಲೇ ಇಷ್ಟು ಎತ್ತರದ ಮರ ಇನ್ನೊಂದಿಲ್ಲ ಎಂಬ ಹೆಸರು ಗಳಿಸಿದೆ. 11 ಅಡಿ ವ್ಯಾಸವಿರುವ ಈ ಮರದ ಜೀವಿತ ಹತ್ತು ಶತಮಾನಗಳನ್ನು ದಾಟಿದೆ.

ದಕ್ಷಿಣ ಕ್ಯಾಲಿಫೋರ್ನಿಯಾದ ಗ್ಲೆಂಟೋರಾದಲ್ಲಿರುವ 125 ವರ್ಷಗಳ ಹಿಂದಿನ ಮೋರೆಟನ್ ಕೊಲ್ಲಿ ಅಂಜೂರ ಮರದ ಬುಡದಲ್ಲಿರುವ ಬೇರುಗಳು ಕಲಾತ್ಮಕವಾಗಿ 1200 ಚದರ ಅಡಿ ಅಗಲವಾಗಿ ವಿಸ್ತರಿಸಿದ್ದು ಈ ಬೇರುಗಳು ನಿರ್ಮಿಸಿದ ಕೋಣೆಯೊಳಗೆ ಮನುಷ್ಯನೊಬ್ಬ ಸುಖವಾಗಿ ಆಸೀನನಾಗಬಹುದು. ವೃಕ್ಷ ಜಗತ್ತಿನಲ್ಲಿ ಇಂಥ ಚೋದ್ಯಗಳು ಇನ್ನೆಷ್ಟೋ ಇವೆ.

■ ಪ.ರಾಮಕೃಷ್ಣ ಶಾಸ್ತ್ರಿ